ಓಃಎಸ್ಃನಂ.48/2015

ಡಿ .ಡಬ್ಲ್ಯೂ- 1

**ದಿನಾಂಕಃ 29-10-2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

ಮುಂದುವರಿದ **ಪಾಟೀ ಸವಾಲುಃ** ವಾದಿ ಪರ ಶ್ರೀ ಜಿ ಎಂ **ವಕೀಲರಿಂದ**

ನಾನು 3 ನೇ ತರಗತಿಯನ್ನು ಓದಿರುತ್ತೇನೆ. ನನಗೆ ಕನ್ನಡ ಓದಲು ಬರೆಯಲು ಬರುತ್ತದೆ. ದಿನಾಂಕಃ 15-02-2003 ರಂದು ನಿಮ್ಮ ತಂದೆಯ ಆಸ್ತಿಯಾದ ಸರ್ವೆ ನಂ.166 ನ್ನು ನೀವೆಲ್ಲರೂ ಸೇರಿ ವಿಭಾಗ ಮಾಡಿಕೊಂಡಿರುತ್ತಿರಾ ಎಂದರೆ ಸಾಕ್ಷಿ ಇಲ್ಲ ಎಂದು ನುಡಿದಿರುತ್ತಾರೆ. ಸಾಕ್ಷಿಗೆ ಒಂದು ದಾಖಲಾತಿಯನ್ನು ತೋರಿಸಿದ್ದು ದಿಃ 15-02-2003 ರಂದು ಆಗಿರುವ ನೋಂದಾಯಿತ ವಿಭಾಗ ಪತ್ರ ಆಗಿದ್ದು, ಸಾಕ್ಷಿ ಅದನ್ನು ನೋಡಿ ಅದು ಸೃಷ್ಠಿಸಿರುವ ದಾಖಲಾತಿ ಎಂದು ನುಡಿದಿರುತ್ತಾರೆ. ಸರ್ವೆ ನಂ.166 ಜಮೀನನ್ನು ತರೀಕೆರೆ ಸಬ್ ರಿಜಿಸ್ಟ್ರರ್ ಕಛೇರಿಯಲ್ಲಿ ನೀವು ಮತ್ತು ನಿಮ್ಮ ತಂದೆಯವರು ವಿಭಾಗ ಮಾಡಿಕೊಂಡಿರುತ್ತಿರಾ ಎಂದರೆ ಸಾಕ್ಷಿ ಇಲ್ಲ ಎಂದು ನುಡಿದಿರುತ್ತಾರೆ. ಸರ್ವೆ ನಂ.52 ದಾಖಲಾತಿಯು ಕೃಷ್ಣಪ್ಪನವರ ಹೆಸರಿನಲ್ಲಿದ್ದು, ಅವರು ನನಗೆ ದಾನ ಮಾಡಿರುತ್ತಾರೆ. 2013 ನೇ ಸಾಲಿನಲ್ಲಿ ನನಗೆ ನೊಂದಾಯಿತ ದಾನ ಪತ್ರ ಮಾಡಿರುತ್ತಾರೆ. ಸಾಕ್ಷಿಯು ದಿನಾಂಕಃ 25-03-2013 ರ ಕಂಪ್ಯೂಟರೀಕೃತ ದಾನಪತ್ರವನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ-46 ಎಂದು ಗುರುತಿಸಲಾಯಿತು.

40 ಇಂಟು 40 ಖಾಲಿ ನಿವೇಶನವು ನಿಮಗೆ ನಿಮ್ಮ ತಂದೆಯವರು ವಿಭಾಗ ಮಾಡಿಕೊಂಡ ರೀತಿಯಿಂದ ನಿಮಗೆ ಬಂದಿರುತ್ತದೆ ಎಂದರೆ ಸಾಕ್ಷಿ ಇಲ್ಲ ಎಂದು ನುಡಿದಿರುತ್ತಾರೆ. ಸಾಕ್ಷಿಯು ಮುಂದುವರಿದು 52 ನೇ ಸರ್ವೆ ನಂಬರ್ ನಲ್ಲಿ ಗ್ರಾಮ ಪಂಚಾಯಿತಿಯಿಂದ ಬಂದಿರುತ್ತದೆ. ನಿಮ್ಮ ತಂದೆಯಿಂದ ನಿಮಗೆ ದಾನಪತ್ರದ ಮುಖಾಂತರ ಸರ್ವೆ ನಂ.52 ನಿವೇಶನವು ಬಂದಿರುವ ಬಗ್ಗೆ ಯಾವುದಾದರೂ ದಾಖಲಾತಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರತ್ತಿರಾ ಎಂದರೆ ಸಾಕ್ಷಿ ಹಾಜರುಪಡಿಸಿರುತ್ತೇನೆಂದು ನುಡಿದಿರುತ್ತಾರೆ. ಸರ್ವೆ ನಂ.52 ರ ಚಕ್ಕುಬಂದಿ ನನಗೆ ತಿಳಿದಿರುತ್ತದೆ, ಅದರ ಪೂರ್ವಕ್ಕೆ ಕೃಷ್ಣಪ್ಪನವರ ಹಿಡುವಳಿ ಜಮೀನು, ಪಶ್ಚಿಮಕ್ಕೆ ಕೆಂಪುಸಿದ್ದಮ್ಮ ಮತ್ತು ಬಿ. ಎಂ ರಮೇಶ್ ರವರ ಜಮೀನು, ಉತ್ತರಕ್ಕೆ 166 ಸರ್ವೆ ನಂಬರ್

ನ ಕೃಷ್ಣಪ್ಪ , ದಕ್ಷಿಣಕ್ಕೆ ಮೀನಾ ಕೃಷ್ಣಪ್ಪನವರ ಮನೆ ಮತ್ತು ಸರ್ಕಾರಿ ರಸ್ತೆ. ಪೂರ್ವಕ್ಕೆ ರಸ್ತೆ ಬಂದು ಅದರ ಪಕ್ಕಕ್ಕೆ ಮಾದತ್ತಿಗೌಡರ ಜಮೀನು ಬರುತ್ತದೆ ಎಂದರೆ ಸಾಕ್ಷಿ ಇಲ್ಲ ಎಂದು ನುಡಿದಿರುತ್ತಾರೆ. ಸರ್ವೆ ನಂ.52 ರಿಂದ ನನಗೆ ದಾನದ ಮುಖಾಂತರ ಬಂದ ಸ್ವತ್ತಿನ ಅಸಸ್ ಮೆಂಟ್ ನಂ.322 ಆಗಿರುತ್ತದೆ. ಮಾದತ್ತಿಗೌಡರ ಮನೆಯ ಅಸಸ್ ಮೆಂಟ್ ನಂಬರ್ ನಿಮಗೆ ತಿಳಿದಿದೆಯೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿದಿರುತ್ತಾರೆ. ಸರ್ವೆ ನಂ.167 ರ ದಕ್ಷಿಣ ದಿಕ್ಕಿಗೆ ಸರ್ವೆನಂ.52 ರಲ್ಲಿ ಮಾದತ್ತಿಗೌಡರು ಮನೆ ಕಟ್ಟಿರುತ್ತಾರೆಂದರೆ ಸಾಕ್ಷಿ ಮೀನಾ ಕೃಷ್ಣಪ್ಪನವರು ಸ್ವಾಧೀನದಲ್ಲಿರುತ್ತಾರೆಂದು ನುಡಿದಿರುತ್ತಾರೆ. ಗ್ರಾಮ ಪಂಚಾಯಿತಿಯಿಂದ ಮಾದತ್ತಿಗೌಡರಿಗೆ ಮನೆ ಕಟ್ಟಲು ಪರವಾನಗಿ ನೀಡಿರುತ್ತಾರೆಂದರೆ ಸಾಕ್ಷಿ ಅದು 167 ಸರ್ವೆ ನಂಬರ್ ಪಿತ್ರಾರ್ಜಿತ ಆಸ್ತಿಗೆ ನೀಡಿರುತ್ತಾರೆಂದು ನುಡಿದಿರುತ್ತಾರೆ. ನಿಪಿ-44 ಮತ್ತು ನಿಪಿ-37 ರಲ್ಲಿ ಸರ್ವೆಯರ್ ರವರು ಸರ್ವೆ ಮಾಡಿ ಸರ್ವೆ ನಂ.52 ರಲ್ಲಿ ಮಾದತ್ತಿಗೌಡರವರು ಮನೆ ಕಟ್ಟಿರುತ್ತಾರೆಂದು ವರದಿ ನೀಡಿರುತ್ತಾರೆಂದರೆ ಸಾಕ್ಷಿ ಅದನ್ನು ಈ ದಾವೆ ಹೂಡಿದ ನಂತರ ಸೃಷ್ಠಿ ಮಾಡಿರುತ್ತಾರೆಂದು ನುಡಿದಿರುತ್ತಾರೆ.

ನಿಪಿ-44 ರಲ್ಲಿ ಸರ್ವೆ ನಂ.166 ಮತ್ತು 167 ರ ನಡುವೆ ಇರುವ ದಾರಿ ಎಂದರೆ ಸಾಕ್ಷಿ ಹೌದು ಎಂದು ನುಡಿದಿರುತ್ತಾರೆ. ನಿಪಿ-46 ಮತ್ತು 47 ರಲ್ಲಿ ಕಾಣುತ್ತಿರುವ ಹೆಂಚಿನ ಮನೆ ಮಾದತ್ತಿಗೌಡರದು ಎಂದರೆ ಸಾಕ್ಷಿ ಅಲ್ಲ ಎಂದು ನುಡಿದಿರುತ್ತಾರೆ. ನೀವು ನಿಪಿ-46 ಮತ್ತು 47 ರಲ್ಲಿ ಕಾಣುತ್ತಿರುವ ಹೆಂಚಿನ ಮನೆಯನ್ನು ಕೆಡವಲು ಜೆ ಸಿ ಬಿ ಯನ್ನು ತೆಗೆದುಕೊಂಡು ಹೋಗಿದ್ದು, ಆ ಸಮಯದಲ್ಲಿ ಮಾದತ್ತಿಗೌಡರು ನಿಮ್ಮನ್ನು ತಡೆದು ಲಕ್ಕವಳ್ಳಿ ಪೊಲೀಸ್ ಠಾಣೆಯಲ್ಲಿ ದೂರು ನೀಡಿರುತ್ತಾರೆಂದರೆ ಸರಿಯಲ್ಲ. ಇದೇ ನ್ಯಾಯಾಲಯದಲ್ಲಿ ನಿಮ್ಮ ಹಾಗೂ ನಿಮ್ಮ ಗಂಡ ಹಾಗೂ ತಂದೆ ಮೇಲೆ ಮಾದತ್ತಿಗೌಡರವರು ಕ್ರಿಮಿನಲ್ ಪ್ರಕರಣವನ್ನು ಹೂಡಿರುತ್ತಾರೆಂದರೆ ಸಾಕ್ಷಿ ಸೃಷ್ಠಿ ಮಾಡಿರುತ್ತಾರೆಂದು ನುಡಿದಿರುತ್ತಾರೆ. ವಾದಿಯು ನಾವು

ಅವರ ಮೇಲೆ ದೌರ್ಜನ್ಯ ಮಾಡಿ ಗಲಾಟೆ ಮಾಡಿರುತ್ತಾರೆಂದು ದಾವೆ ಹೂಡಿರುತ್ತಾರೆ, ಆದರೆ ನಾವು ಆ ರೀತಿ ಯಾವ ಕೆಲಸವನ್ನು ಮಾಡಿರುವುದಿಲ್ಲ. ವಾದಿಯು ಅಸಸ್ ಮೆಂಟ್ ನಂ.167 ರ ಮೇಲೆ ದಾವೆಯನ್ನು ಹೂಡಿರುತ್ತಾರೆ. ದಾವ ಸ್ವತ್ತಿನ ಚಕ್ಕುಬಂದಿ ಪೂರ್ವಕ್ಕೆ ಮಲ್ಲಾರಾಧ್ಯರ ಮಗ ರುದ್ರಾರಾಧ್ಯ, ಪಶ್ಚಿಮಕ್ಕೆ ಬಿ. ಎಂ ರಮೇಶ್ ಮತ್ತು ಕೆಂಪುಸಿದ್ದಮ್ಮನವರ ಜಮೀನು, ಉತ್ತರಕ್ಕೆ 166 ಮತ್ತು 167 ಜಮೀನು, ದಕ್ಷಿಣಕ್ಕೆ ಮೀನಾ ಕೃಷ್ಣಪ್ಪನವರ ಮನೆ ಹಾಗೂ ಸರ್ಕಾರಿ ರಸ್ತೆ ಬರುತ್ತದೆ. ಇದೇ ನ್ಯಾಯಾಲಯದಲ್ಲಿ ಸರ್ವೆ ನ ಂ52 ರ ಬಾಬ್ತು ವಾದಿಯ ಮೇಲೆ ದಾವೆ ಹೂಡಿದ್ದರು ಎಂದರೆ ಸಾಕ್ಷಿ ಹೌದು ಎಂದು ನುಡಿದಿರುತ್ತಾರೆ. ಆ ದಾವೆಯು ವಜಾ ಆಗಿರುತ್ತದೆ ಎಂದರೆ ಸಾಕ್ಷಿ ಸ್ವಾಧೀನವಿಲ್ಲ ಎಂದು ವಜಾ ಆಗಿರುವುದಿಲ್ಲ, ಆರ್ ಟಿಸಿ ಇಲ್ಲ ಎಂದು ವಜಾ ಆಗಿದೆ ಎಂದು ನುಡಿದಿರುತ್ತಾರೆ. ಸಾಕ್ಷಿಯು ಮುಂದುವರಿದು ಅದರ ಮೇಲೆ ನಾವು ಮೇಲ್ಮನವಿ ಹೋಗಿರುತ್ತೇವೆ ಎಂದು ನುಡಿದಿರುತ್ತಾರೆ. ನರಸಿಂಹಮೂರ್ತಿಯವರು ನನಗೆ ತಮ್ಮ ಆಗಬೇಕು.

ನರಸಿಂಹಮೂರ್ತಿ ಸರ್ವೆ ನಂ.52 ರ ಮೇಲೆ ಫಾರಂ ನಂ.53 ನ್ನು 1 ಎಕರೆಗೆ ಅರ್ಜಿ ಹೂಡಿರುತ್ತಾರೆಂದರೆ ಸಾಕ್ಷಿ ಸುಳ್ಳು ಅರ್ಜಿಯನ್ನು ಹೂಡಿರುತ್ತಾರೆಂದು ನುಡಿದಿರುತ್ತಾರೆ, ಅವರು ಸ್ವಾಧೀನದಲ್ಲಿ ಇರುವುದಿಲ್ಲ. ಮಾದತ್ತಿಗೌಡರವರಿಗೆ ಪಂಚಾಯಿತಿಯವರು ನೀಡಿರುವ ದಾವ ಸ್ವತ್ತನ್ನು ಲಪಾಟಯಿಸಲು ನೀವು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದಿರಾ ಎಂದರೆ ಸರಿಯಲ್ಲ. ದಾವ ಆಸ್ತಿಗೆ ಸಂಬಂಧಪಟ್ಟಂತೆ ವಾದಿಗಳು ಕಂದಾಯ ಕಟ್ಟುತ್ತಿದ್ದಾರೆಂದರೆ ಸಾಕ್ಷಿ ಅವರ ಪಿತ್ರಾರ್ಜಿತ ಆಸ್ತಿಗೆ ಕಟ್ಟುತ್ತಿರುತ್ತಾರೆಂದು ನುಡಿದಿರುತ್ತಾರೆ. ದಾವ ಸ್ವತ್ತಿನ ಅಸಸ್ ಮೆಂಟ್ ಈಗಲೂ ಸಹ ವಾದಿಯ ಹೆಸರಿನಲ್ಲಿರುತ್ತದೆ ಎಂದರೆ ಸಾಕ್ಷಿ ಅವರ ಪಿತ್ರಾರ್ಜಿತ ಆಸ್ತಿಯ ಮೇಲೆ ಇರುತ್ತದೆ ಎಂದು ನುಡಿದಿರುತ್ತಾರೆ. ಗ್ರಾಮ ಪಂಚಾಯಿತಿಯ

ಓಃಎಸ್ಃನಂ.48/2015

**ಡಿ.ಡಬ್ಲ್ಯೂ- 1**

ಪಿಡಿಒ ರವರನ್ನು ಈ ದಾವೆಯಲ್ಲಿ ಸಾಕ್ಷಿದಾರರನ್ನಾಗಿ ಮಾಡಲು ನನಗೆ ಯಾವುದೇ ತೊಂದರೆ ಇಲ್ಲ.

ಮರು ವಿಚಾರಣೆಃ ಇಲ್ಲ

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)**

ಓ. ಕೇ. ಸ. ಇ. ಎ. ಒ.

Sd/-

1 ನೇ **ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು**

**ಪ್ರ.ದ.ನ್ಯಾ.ದಂ.ರವರು,ತರೀಕೆರೆ.**